ಓಃಎಸ್ಃನಂ.*50/2020*

ಪಿ .ಡಬ್ಲ್ಯೂ- *1*

***ದಿಃ 20-07-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.***

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ ಎಲ್ ಆರ್ ವಕೀಲರಿಂದ**

ನಿಪಿ-*1* ರ ಕ್ರಯಪತ್ರದಲ್ಲಿ ಪಡೆದಿರುವ ಸ್ವತ್ತನ್ನು ಗುಂಟೆ ಲೆಕ್ಕದ ಆಧಾರದಲ್ಲಿ ಕ್ರಯಕ್ಕೆ ಪಡೆದಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಅಡಿಗಳ ಲೆಕ್ಕದಲ್ಲಿ ದಾವ ಸ್ವತ್ತನ್ನು ಖರೀದಿ ಮಾಡಿರುತ್ತೇವೆ ಎಂದು ಸಾಕ್ಷ್ಯ ನುಡಿಯುತ್ತಾರೆ. ದಾವ ಆಸ್ತಿಯ ಬಗ್ಗೆ ನಾನು ತರೀಕೆರೆಯ ಎಸಿ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ್ದೇವೆ ಎಂದರೆ ಸರಿ. ತರೀಕೆರೆಯ ಉಪವಿಭಾಗಾಧಿಕಾರಿಗಳ ಆದೇಶದ ಮೇರೆಗೆ ಕಂದಾಯ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಲು ಬಂದಿರುತ್ತಾರೆಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಕಂದಾಯ ಅಧಿಕಾರಿಗಳ ಮುಂದೆ ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ದಾವ ಸ್ವತ್ತಿಗೆ ಸಂಬಂಧಪಟ್ಟಂತೆ ನಾನು ಖಾತೆ ವರ್ಗಾವಣೆ ಮಾಡಿಕೊಳ್ಳಲು ಕಂದಾಯ ಅಧಿಕಾರಿಗಳಿಗೆ *1974* ನೇ ಸಾಲಿನಲ್ಲಿ ಅರ್ಜಿಯನ್ನು ನೀಡಿರುತ್ತೇನೆ. ಸದರಿ ಅರ್ಜಿಯ ಪ್ರಕಾರ ಕಂದಾಯ ಅಧಿಕಾರಿಗಳು ನನ್ನ ಹೆಸರಿಗೆ ಬದಲಾವಣೆ ಮಾಡಿರುವುದಿಲ್ಲ, ಸಾಕ್ಷಿ ಮುಂದುವರಿದು ದಾವ ಆಸ್ತಿಯ ಖಾತೆಯು ಪ್ರಸ್ತುತ ನನ್ನ ಹೆಸರಿಗೆ ವರ್ಗಾವಣೆ ಆಗಿದೆ ಎಂದು ನುಡಿಯುತ್ತಾರೆ. ದಾವ ಆಸ್ತಿಯ ಖಾತೆ ಯಾವಾಗ ಆಯಿತು ಎಂದರೆ ನನಗೆಗೊತ್ತಿಲ್ಲ, ಆದರೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಎಸಿ ನ್ಯಾಯಾಲಯದಲ್ಲಿ ದಾವ ಆಸ್ತಿಗೆ ಸಂಬಂಧಪಟ್ಟಂತೆ ಖಾತೆಯಾಗಬೇಕೆಂದು ಮೇಲ್ಮನವಿಯನ್ನು ಸಲ್ಲಿಸಿರುತ್ತೇನೆ. *1974* ನೇ ಸಾಲಿನಿಂದ ತಾವು ದಾವ ಆಸ್ತಿಗೆ ಸಂಬಂಧಪಟ್ಟಂತೆ ಖಾತೆ ಮಾಡಿಕೊಳ್ಳಲು ಏಕೆ ಪ್ರಯತ್ನಪಟ್ಟಿಲ್ಲ ಎಂದರೆ ಸಾಕ್ಷಿಯು ಕರಿಯಪ್ಪನವರು ಖಾತೆ ವರ್ಗಾವಣೆ ಮಾಡಿಕೊಡುತ್ತೇನೆಂದು ಹೇಳಿದ್ದರಿಂದ ಮಾಡಿಲ್ಲ ಎಂದು ನುಡಿಯುತ್ತಾರೆ. ಕರಿಯಪ್ಪನವರು ಸುಮಾರು *10-12* ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ನಿಪಿ-*1* ಕ್ರಯಪತ್ರವು ಮೋಸದ ಕ್ರಯಪತ್ರವಾದ ಕಾರಣ ಕರಿಯಪ್ಪನವರ ಜೀವಿತಾವಧಿಯಲ್ಲಿಯು ಸಹ ನಾವು ಅವರನ್ನು ಖಾತೆ ಮಾಡಿಕೊಡಿ ಎಂದು ಕೇಳಿಲ್ಲ ಎಂದರೆ ಸರಿಯಲ್ಲ. ನನಗೆ ದಾವ ಸ್ವತ್ತಿನಲ್ಲಿ ಯಾವುದೇ ಹಕ್ಕು ಇಲ್ಲದೇ ಇದ್ದರೂ ಸಹ ನಾನು ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ನಮ್ಮ ಗ್ರಾಮದಲ್ಲಿ ಮಹೇಶ್ವರಪ್ಪ ಬಿನ್ ರಂಗಪ್ಪ ಮತ್ತು ಬಿ.ಟಿ. ರಾಮಪ್ಪ ಬಿನ್ ತಿಮ್ಮಪ್ಪ , ಕಲ್ಲೇಶಪ್ಪ

ಬಿನ್ ಚಂದ್ರಪ್ಪ, ರಂಗಪ್ಪ ಬಿನ್ ನಿಂಗಪ್ಪ, ರಾಜಪ್ಪ ಬಿನ್ ಕರಿಯಪ್ಪ, ರಂಗಸ್ವಾಮಿ ಬಿನ್ ರಂಗಪ್ಪ ಇದ್ದಾರೆಂದರೆ ಸರಿ. ಸದರಿ ವ್ಯಕ್ತಿಗಳ ಮತ್ತು ನನ್ನ ನಡುವೆ ಯಾವುದೇ ದ್ವೇಷ ಇಲ್ಲ ಎಂದರೆ ಸರಿಯಲ್ಲ. ಸದರಿ ವ್ಯಕ್ತಿಗಳು ಕಂದಾಯ ಅಧಿಕಾರಿಗಳು ದಾವ ಸ್ವತ್ತಿನ ಸ್ಥಳ ಪರಿಶೀಲನೆ ಮಾಡಿದಾಗ ಅಲ್ಲಿ ಜರುಗಿಸಿದ ಮಹಜರ್ ಕ್ರಮಕ್ಕೆ ಸಹಿಗಳನ್ನು ಹಾಕಿದ್ದಾರೆಂದರೆ ಸಾಕ್ಷಿಯು ಅವರು ದುರುದ್ದೇಶದಿಂದ ಸಹಿ ಹಾಕಿದ್ದಾರೆಂದು ನುಡಿಯುತ್ತಾರೆ. ರೆವಿನ್ಯೂ ಅಧಿಕಾರಿಗಳು ಮತ್ತು ನಿಮ್ಮ ನಡುವೆ ದ್ವೇಷ ಇದೆಯೇ ಎಂದರೆ ಅವರು ಸಹ ನಮ್ಮ ಮೇಲೆ ದ್ವೇಷ ಸಾಧಿಸುತ್ತಿದ್ದಾರೆಂದು ನುಡಿಯುತ್ತಾರೆ. ಎಸಿ ನ್ಯಾಯಾಲಯದಲ್ಲಿ ಸ್ಥಳ ಪರಿಶೀಲನೆ ಮಾಡುವಂತೆ ನಾನೇ ಕೋರಿರುತ್ತೇನೆಂದರೆ ಸರಿಯಲ್ಲ. ನಾನು ದಾವ ಷೆಡ್ಯೂಲ್ ನಲ್ಲಿ ನಮೂದು ಮಾಡಿರುವ ಚೆಕ್ಕುಬಂದಿ ಸರಿಯಿಲ್ಲ ಎಂದರೆ ಸರಿಯಲ್ಲ. ದಾವ ಆಸ್ತಿಯ ಸರಿಯಾದ ಚಕ್ಕುಬಂದಿ ಪೂರ್ವಕ್ಕೆ ರಾಮಕ್ಕ ಕೋಂ ತಿಮ್ಮಣ್ಣನವರು ಜಮೀನು ಎಂದರೆ ಸರಿಯಲ್ಲ. ಪಶ್ಚಿಮಕ್ಕೆ ನಾಗರಾಜಪ್ಪನವರ ಜಮೀನು ಎಂದರೆ ಸರಿ. ದಕ್ಷಿಣಕ್ಕೆ ಪ್ರತಿವಾದಿಯ ನಿವೇಶನ ಎಂದರೆ ಸರಿ. ಉತ್ತರಕ್ಕೆಃ ದಾಸಣ್ಣನವರ ಜಮೀನು ಎಂದರೆ ಸರಿ.

ಮರು ವಿಚಾರಣೆಃ ಇಲ್ಲ

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

***ಓ. ಕೇ. ಸ. ಇ. ಎ. ಒ.***

Sd/-

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***

***ಪ್ರ.ದ.ನ್ಯಾ.ದಂ.ರವರು,ತರೀಕೆರೆ.***